

ಖಾಲಿಯಾದ ದಿನ. ದೈವ ನನಗೆ ಕೈಕೊಟ್ಟ ದಿನ. ನನ್ನ ಗಂಡ ನನ್ನ ತಂಗಿಗೂ ಗಂಡನಾದ ದಿನ.

ಮುಂದೆ ನಡೆದದ್ದೇ ಬೇರೆ ಒಂದು ಹುಡುಗಿಯ ಬಾಳು ಹಾಳಾಗುವುದು ಬೇಡ ಅಂತ ಅತ್ತೆ ಅವರಿಬ್ಬರಿಗೂ ದೇವಸ್ಥಾನದಲ್ಲಿ ಸರಳವಾಗಿ ವಿವಾಹ ಮಾಡಿದರು. ನಾಲ್ಕು ಎಕರೆ ತೋಟ, ತೋಟದ ಮನೆಯನ್ನು ಅವರುಗಳ ಹೆಸರಿಗೆ ಬರೆದರು. ನನ್ನ ಹೆಸರಿಗೆ ಹತ್ತು ಎಕರೆ ತೋಟ–ಮನೆ ಬರೆದರು. ರಾಜೇಂದ್ರನನ್ನು ಕಣ್ಣಲ್ಲಿ ಕಣ್ಣಿಟ್ಟು ಸಾಕಿದರು. ನನ್ನನ್ನು ಮಗಳಿಗಿಂತ ಹೆಚ್ಚಾಗಿ ನೋಡಿಕೊಂಡರು. 'ಮುಂದೆ ಓದಿಸುತ್ತೇನೆ. ಹಿಂದೆ ನಡೆದುದನ್ನು ಮರೆತು ಬಿಡು. ನಿನಗೆ ಬೇರೆ ಮದುವೆ ಮಾಡುತ್ತೇನೆ' ಎಂದರು. ನಾನು ಒಪ್ಪಲಿಲ್ಲ. ನನ್ನ ಬದುಕಿನಲ್ಲಿ ಓದು ವಿವಾಹ ಮುಗಿದ ಅಧ್ಯಾಯ. ಮಧುರ ಭಾವನೆಗಳಂತೂ ಸತ್ತು ನೆಲ ಸೇರಿದ್ದವು.

ಶಶಿಧರನನ್ನು ಮದುವೆಯಾದ ಸಕುಂತ ಹೇಗೆ ಬದುಕಿದಳು ಎಂಬುದನ್ನು ಕಣ್ಣಲ್ಲಿ ನೋಡದಿದ್ದರೂ ಕಿವಿಯಲ್ಲಿ ಕೇಳುತ್ತಿದ್ದೆ. ಮಗು ಹುಟ್ಟಿ ನಾಕು ದಿನ ಇದ್ದು ತೀರಿಹೋಯಿತು. ಮತ್ತೆ ಅವಳಿಗೆ ಮಕ್ಕಳಾಗಲಿಲ್ಲ. ಒಂದು ಮಗುವನ್ನು ದತ್ತು ತೆಗೆದುಕೊಳ್ಳುವಂತೆ ಕೆಲವರು ಸಲಹೆ ನೀಡುತ್ತಾರಂತೆ. ಒಂದು ಸಾರಿ ರಾಜೇಂದ್ರ ರಸ್ತೆಯಲ್ಲಿ ಹೋಗುತ್ತಿದ್ದಾಗ ಸಕುಂತ ಓಡಿ ಬಂದು ಇವನನ್ನು ತಬ್ಬಿಕೊಂಡು ಅತ್ತು ಗ್ಯಾನ ತಪ್ಪಿ ಬಿದ್ದವಳನ್ನು ನೀರು ಕುಡಿಸಿ ಮನೆತನಕ ಬಿಟ್ಟು ಬಂದ ಸಂಗತಿ ತಿಳಿಯಿತು. ಆ ಮನುಷ್ಯನೂ ರಾಜೇಂದ್ರನನ್ನು ಕದ್ದು ಕದ್ದು ನೋಡುವುದಂತೆ. ಅಮ್ಮ ಅಪ್ಪಯ್ಯರಿಗೂ ವಿಧಿಯಿಲ್ಲ. ಏನು ಮಾಡುತ್ತಾರೆ, ಅವಳೂ ಮಗಳಲ್ಲವೇ? ಪ್ರಾಣಸಂಕಟ. ಅತ್ತೆಗೂ ಅಷ್ಟೆ, ಹೊಟ್ಟೆಯಲ್ಲಿ ಹುಟ್ಟದ ಮಗ ತಾನೆ? ಧರ್ಮಸಂಕಟಗಳ ನಡುವೆ ಬದುಕು ಸಾಗುತ್ತಿದೆಯಾದರೂ ನಾನು ಮಾತ್ರ ಇಷ್ಟು ವರ್ಷಗಳ ದೀರ್ಘಯಾನದಲ್ಲಿ ಆ ಮನುಷ್ಯನ, ಮತ್ತವಳ ಮುಖ ನೋಡಲೇ ಇಲ್ಲ. ಆದರೆ ಈಗ ಪರಿಸ್ಥಿತಿಯೆ ಬೇರೆ.

ಆ ಮನುಷ್ಯನಿಗೆ ಈಗ ಕ್ಯಾನ್ಸರ್ ಬಂದಿದೆಯಂತೆ, ವೆಲ್ಲೂರಿನ ಆಸ್ಪತ್ರೆಗೆ ಸೇರಿಸಿದ್ದಾರೆಂದು, ಸಕುಂತ ಒಬ್ಬಳೇ ನೋಡಿಕೊಳ್ಳುತ್ತಿದ್ದಾಳೆಂದು ತಿಳಿಯಿತು. ಉಳಿಯುವ ಗ್ಯಾರಂಟಿ ಇಲ್ಲಂತೆ ಅಂತ ಅಲ್ಲಿ ಇಲ್ಲಿ ಗುಸುಗುಸು ಕೇಳುತ್ತಿದೆ. ಒಂದು ವೇಳೆ ಸತ್ತುಹೋದರೆ ಏನು ಮಾಡಲಿ? ಸಾವಿಗೆ ಹೋಗುವುದಾ ಬಿಡುವುದಾ? ಸಂಪ್ರದಾಯ, ಶಾಸ್ತ್ರ, ಕುಂಕುಮ ಬಳೆ ತೆಗೆಯುವುದು ಯಾವುದೂ ಮರೆಯಾಗಿಲ್ಲ. ಸತ್ತಾಗಲೂ ಬಂದು ನೋಡಲಿಲ್ಲ ಎನ್ನುವವರು, ಬುದ್ಧಿ ಹೇಳುವವರು ಹುಟ್ಟಿಕೊಳ್ಳುತ್ತಾರೆ. ಇಲ್ಲಿಯತನಕ ನನಗಿದ್ದ ಗೌರವ ಒಂದು ಕ್ಷಣಕ್ಕೆ ಮಣ್ಣುಪಾಲಾಗುತ್ತದೆ.

ಏನು ಮಾಡಲಿ ಎಂಬುದೇ ನನಗೀಗ ದೊಡ್ಡ ಚಿಂತೆಯಾಗಿದೆ. ಇರಲಿ, ಇಲ್ಲಿಯ ತನಕ ಕಾಪಾಡಿದ ದೇವರು ಈಗ ನನ್ನನ್ನು ಕೈಬಿಡುವುದಿಲ್ಲ. ಎಷ್ಟು ಯೋಚಿಸಿದರೂ ಅಷ್ಟೇ... ಏನಾಗಬೇಕೋ ಅದು ಆಗಿಯೇ ತೀರುತ್ತದೆ. ಹೀಗೆ ನನಗೆ ನಾನೇ ಸಮಾಧಾನ ಮಾಡಿಕೊಂಡು, ಬಹಳ ಹೊತ್ತು ದೇವಸ್ಥಾನದಲ್ಲಿ ಕುಳಿತು ಬದುಕಿನ ಪುಟಗಳನ್ನು ತಿರುವಿ ಹಾಕಿ, ದೇವರಿಗೆ ಕೈ ಮುಗಿದು ಅಡ್ಡಬಿದ್ದು, ಮಹಾಮಂಗಳಾರತಿಯಾದ ಮೇಲೆ ಪ್ರಸಾದ ತೆಗೆದುಕೊಂಡು ನನ್ನ ಬಹು ಕಾಲದ ಗೆಳತಿ ಶಾಂತಿಯ ಮನೆಗೆ ಹೋಗಿ, ಅಲ್ಲೇ ಇದ್ದು ಕಷ್ಟಸುಖ ಮಾತಾಡಿ, ರಾತ್ರಿ ಊಟ ಮುಗಿಸಿ ಮನೆಗೆಹೋದೆ. ಮನಸ್ಸು ಬಹಳ ನಿರಾಳವಾಗಿತ್ತು

'ಶಾಂತಕ್ಕಾ ಶಾಂತಕ್ಕಾ... ನಾನು ಸಕುಂತ... ಬಾಗ್ಲು ತಗಿರಿ.'

'ಬಾ ಬಾ ಸಕುಂತ. ಯಾವಾಗ ಬಂದ್ರಿ. ಶಶಿಧರ ಹುಷಾರ?'

'ಪರವಾಗಿಲ್ಲ ಶಾಂತಕ್ಕ. ಜೀವ ಉಳೀತು. ನಿನ್ನೆ ರಾತ್ರಿ ಎರಡು ಗಂಟೆ ಬಂದಾಗ. ಶಾಂತಕ್ಕ ನಮ್ಮ ಅಕ್ಕಯ್ಯರ ಮನಿ ಬಾಗ್ಲು ಹಾಕ್ಯದೆ. ರಂಗೋಲಿನೂ ಬಟ್ಟಿಲ್ಲ. ನಿಂತು ನಿಂತು ಸಾಕಾಯ್ತು. ನಮ್ಮ ಅಕ್ಕಯ್ಯ ಎಲ್ಲಿ? ಶಾಂತಕ್ಕ ರಾಜೇಂದ್ರ ಏನಾರ ಪ್ಯಾಟಿಗೆ ಕರ್‍ಕಹ್ವಾದನ?'

'ಸಕುಂತ ಕೂತ್ಗ. ತಗ ನೀರು ಕುಡಿ. ಎದೆ ಗಟ್ಟಿ ಮಾಡ್ಕ.'

'ಯಾಕ್ ಶಾಂತಕ್ಕ. ನಮ್ಮ ಅಕ್ಕಯ್ಯಗೆ ಏನಾಯ್ತು?'

'ಏನು ಅಂತ ಹೇಳ್ಲಿ. ನನ್ನ ಜೀವ ಆದ್ರೂ ಹೋಗ್ಬಾರ್‍ದಾ? ನಿಮ್ಮ ಅಕ್ಕಯ್ಯ ತೀರಿಹೋದ್ರು ಕನ ಸಕುಂತ, ಅವತ್ತು ದೇವಸ್ಥಾನಕ್ಕೆ ಹೋಗಿ ಇಲ್ಲಿಗೆ ಬಂದು ಸುಮಾರ್ ಹೊತ್ತು ಮಾತಾಡಿ... ಉಳೀರಿ ಅಂದೆ, ಇಲ್ಲ ಮನಿಗೆ ಹೋಗುತ್ನಿ ಅಂತ ಹ್ವಾದ್ರು. ಬೆಳಿಗ್ಗೆ ಎದ್ದು ಬಾಗ್ಲು ತಗ್ದು ನೀರಾಕಿ ರಂಗೋಲಿ ಹಾಕ್ತಾ ಬಿದ್ರು... ಅಷ್ಟೇ, ಹೋಗೆ ಆಯ್ತು. ಏನು ಅಂತ ಹೇಳದು ಸಂಕಟನ. ಜನ ಬಂದ್ರು ಬಂದ್ರು ಸಕುಂತಾ... ಜಾತ್ರಿ ಜಾತ್ರಿ... ರಾಜೇಂದ್ರನ ಜೊತೆ ಡಾಕ್ಟರುಗಳ ಗುಂಪೇ ಬಂದಿತ್ತು. ಕಣ್ಣು ದಾನ ಮಾಡಿದ. ಅತ್ತ ಅತ್ತ ಅತ್ತ... ಮಾರಾಗಿತ್ತಿ, ಅವನ ಗೋಳು ನೋಡ್ಬಾರ್‍ದು... ಕಣ್ಣು ಮುಚ್ಚಿ ಬುಡಷ್ಟರಲ್ಲಿ ಎಲ್ಲಾ ಮುಗ್ದೇಹೋಯ್ತು. ಒಳ್ಳೆ ಸಾವು. ಕಾಯಿಲೆ ಕಸಾಲೆ ಏನೂ ಇಲ್ದೆ, ನರಳದೆ, ಸುಖವಾಗಿ ಹೋದ್ರು' – ಶಾಂತಕ್ಕ ಹೇಳುತ್ತಲೇ ಇದ್ದರು. ಸಕುಂತ ಎದೆ ಬಡಿದುಕೊಂಡು ಅಳುತ್ತಿದ್ದಳು.

ಇದೆಲ್ಲ ಆಗಿ ಮೂರು ತಿಂಗಳು ಕಳೆಯಿತು. ಸಕುಂತ ಅನಾಥ ಬಾಲಕಿಯನ್ನು ದತ್ತು ತೆಗೆದುಕೊಂಡಳು. ಅವಳಿಗೆ ಶುಭ ಅಂತ ನಾಮಕರಣ ಮಾಡಿ, ಶಾಲೆಗೆ ಸೇರಿಸಿದಳು.

ಒಂದು ಭಾನುವಾರ ಮಗಳಿಗೆ ಹೊಸ ಬಟ್ಟೆ ಹಾಕಿಸಿಕೊಂಡು ಶಾಂತಕ್ಕರ ಮನೆಗೆ ಬಂದಳು. ಬಹಳ ಹೊತ್ತು ಕಷ್ಟಸುಖ ಮಾತನಾಡಿದಳು. ಅಕ್ಕಯ್ಯನನ್ನು ನೆನೆದು ಅತ್ತಳು .ಹೊರಡುವ ಮುನ್ನ, 'ಶಾಂತಕ್ಕಾ, ನಮ್ಮ ಶುಭನ ಕಣ್ಣು ನಮ್ಮ ಅಕ್ಕಯ್ಯನ ಕಣ್ಣಂಗೆ ಇದವೆ ಅಲ್ವ, ನೋಡಿ' ಅಂದಳು.

ಪ್ರತಿಕ್ರಿಯಿಸಿ: feedback@sudha.co.in